# ವಿಚಿತ್ರ ಆಚರಣೆಯ ವಿಶ್ವರೂಪ

ವಿಶ್ವದ ಬೇರೆ ಬೇರೆ ಭಾಗಗಳಲ್ಲಿನ ಕೆಲವು ವಿಚಿತ್ರ ಆಚರಣೆಗಳ ಕುರಿತ ಟಿಪ್ಪಣಿಗಳು ಇಲ್ಲಿವೆ. ಆಚರಣೆಯ ಹಿಂದಿನ ನಂಬಿಕೆಗಳನ್ನು ಗಮನಿಸಿದರೆ, ಮನುಷ್ಯನ ಆಲೋಚನಾಲಹರಿಯ ಬಗ್ಗೆ ನಿಬ್ಬೆರಗು ಉಂಟಾಗುವಂತೆಯೇ, ಕೆಲವು ಆಚರಣೆಗಳು ವಿಷಾದಕ್ಕೂ ಕಾರಣವಾಗುತ್ತವೆ.

■ ರೂಪಾ ಕೆ.ಎಂ.



## ಹೆಣದೊಂದಿಗೆ ನೃತ್ಯ

ಮನುಷ್ಯ ಮನುಷ್ಯರ ನಡುವೆ ಸ್ನೇಹಮಯ ವಾತಾವರಣ ಕಡಿಮೆಯಾಗುತ್ತಿದ್ದು, ಒಟ್ಟಾಗಿ ಕುಳಿತು ನಗಲು ಪುರುಸೊತ್ತಿಲ್ಲ ಎನ್ನುವವರಿದ್ದಾರೆ. ಅಂಥವರು ಈ ಆಚರಣೆಯನ್ನು ಕಂಡು ದಿಗಿಲು ಬೀಳುವುದು ನಿಶ್ಚಿತ. ಮಡಗಾಸ್ಕರ್‌ನಲ್ಲಿರುವ ಮ್ಯಾಲಗ್ಯಾಸಿ ಎನ್ನುವ ಬುಡಕಟ್ಟು ಜನಾಂಗದಲ್ಲಿ 'ಫಮಾಡಿಹಾನ' ಹೆಸರಿನ ಹೆಣದೊಂದಿಗೆ ನೃತ್ಯ ಮಾಡುವ ಆಚರಣೆ ಚಾಲ್ತಿಯಲ್ಲಿದೆ. ಸಶ್ಮಾನಕ್ಕೆ ಹೆಣ ತಂದು ಅದಕ್ಕೆ ಹೊಸ ಬಟ್ಟೆ ತೊಡಿಸಿ, ಹಾಡಿಗೆ ನೃತ್ಯ ಮಾಡುತ್ತಾರೆ. ಈಗೀಗ ಈ ಆಚರಣೆಯು ನಶಿಸುತ್ತಿದ್ದು, ಸದ್ಯ ಇದು ಏಳು ವರ್ಷಕ್ಕೊಮ್ಮೆ ನಡೆಯುತ್ತದೆ.



## ಮಂಗಗಳಿಗೆ ಭೋಜನ

ಫಸಲೇನೋ ಕಟಾವಿಗೆ ಬಂತು. ಆದರೆ, ಮಂಗನ ಹಾವಳಿ ಮಾರ್‍ರೆ ಎಂಬ ಮಾತು ಮಲೆನಾಡ ಕೃಷಿಕರ ನಡುವೆ ಸಾಮಾನ್ಯ. ಆದರೆ, ಥಾಯ್ಲೆಂಡ್‌ನಲ್ಲಿ ಮಂಗಗಳಿಗಾಗಿಯೇ ದೊಡ್ಡ ಪ್ರಮಾಣದಲ್ಲಿ ಹಣ್ಣು–ತರಕಾರಿಗಳನ್ನು ಇಟ್ಟು, ಅವು ತಿನ್ನುವುದನ್ನು ಕಣ್ತುಂಬಿಕೊಳ್ಳುವ ಹಬ್ಬವೊಂದಿದೆ. ಸುಮಾರು 3,000 ಕೆ.ಜಿ. ಹಣ್ಣು ಮತ್ತು ತರಕಾರಿಯನ್ನು ಇಡಲಾಗುತ್ತದೆ. ಮಂಗಗಳು ಹೊಟ್ಟೆ ಬಿರಿಯುವಷ್ಟು ತಿನ್ನುತ್ತವೆ. ಯಾರೂ ಅವುಗಳನ್ನು ಓಡಿಸಲು ಕೋವಿ ಬಳಸುವುದಿಲ್ಲ.



## ವಧುವಿಗೆ ಮಸಿ

ಯಾರಿಗಾದರೂ ಮಸಿ ಬಳಿದು ವಿರೋಧ ವ್ಯಕ್ತಪಡಿಸುವುದು ಸಾಮಾನ್ಯ. ಇನ್ನು ಮದುವೆ ಮನೆಯಲ್ಲಿ ವರ–ವಧುವಿಗೆಲ್ಲ ಅರಿಶಿನ ಬಳಿದು, ಶಾಸ್ತ್ರ ಮಾಡುವುದನ್ನು ಕೇಳಿದ್ದೇವೆ. ಆದರೆ, ಸ್ಕಾಟ್ಲೆಂಡ್‌ನಲ್ಲಿ ವಧುವಿಗೆ ಮಸಿ ಬಳಿಯಲಾಗುತ್ತದೆ. ಜತೆಗೆ ಮೊಟ್ಟೆಯಲ್ಲಿ ಹೊಡೆಯುವುದು, ಹಾಲು, ಮೊಸರನ್ನು ಮೈಮೇಲೆ ಎರಚಲಾಗುತ್ತದೆ. ಮದುವೆಯಾದ ಮೇಲೆ ಬರುವ ಕಷ್ಟದ ದಿನಗಳಿಗೆ ವಧುವನ್ನು ಮಾನಸಿಕವಾಗಿ ತಯಾರಿ ಮಾಡಲು ಈ ಆಚರಣೆಯನ್ನು ತರಲಾಗಿದೆ. ಈ ಆಚರಣೆಯ ಮುಂದೆ ವೈವಾಹಿಕ ಸಮಸ್ಯೆಗಳೆಲ್ಲವೂ ಚಿಕ್ಕದು ಎನಿಸಲಿ ಎಂಬ ಆಶಯವಿದೆಯಂತೆ.

## ಸಮಯಪಾಲನೆಯ ಅಹಂಕಾರ

ಸಮಯಪಾಲನೆ ಮಾಡುವವರ ಬದ್ಧತೆಯನ್ನು ಮೆಚ್ಚಿ ಮಾತನಾಡುತ್ತೇವೆ. ಆದರೆ, ವೆನಿಜುಲಾದಲ್ಲಿ ಸಮಯಕ್ಕೆ ಸರಿಯಾಗಿ ಹೋಗುವವರನ್ನು ಅಹಂಕಾರಿಗಳೆಂದೇ ಭಾವಿಸಲಾಗುತ್ತದಂತೆ! 15 ನಿಮಿಷಗಳಾದರೂ ತಡವಾಗಿ ಹೋಗಬೇಕು. ಮನೆಗೆ ಕರೆದ ಅತಿಥಿಗಳೇನಾದರೂ ಸಮಯಕ್ಕೆ ಸರಿಯಾಗಿ ಬಂದರೆ, ಅವರನ್ನು ದುರಾಸೆ ಉಳ್ಳವರು ಎಂದು ಪರಿಗಣಿಸಲಾಗುತ್ತದೆಯಂತೆ.

